**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 252/2022**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ನದೀಮ್ ಪಾಷ | | **ಪಿ.ಡಬ್ಲ್ಯೂ– 3** |
| **ತಂದೆಯ ಹೆಸರು** | : ಅಬ್ದುಲ್ ಕರೀಮ್ | | **ಸಿ.ಡಬ್ಲ್ಯೂ– 6** |
| **ವಯಸ್ಸು** | : 39 ವರ್ಷ | | |
| **ಉದ್ಯೋಗ** | : ಎಪಿಎಂಸಿಯಲ್ಲಿ ವ್ಯಾಪಾರ | | |
| **ವಾಸಸ್ಥಳ** | : ಲಷ್ಕರ್ ಮೊಹಲ್ಲಾ, ಮೈಸೂರು. | | |

**ಸಾಕ್ಷಿಯನ್ನು ಈ ದಿನ ದಿಃ18.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**1.** ನಾನು ದಾಖಲೆಗೆ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–5 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ 12 ವರ್ಷಗಳ ಹಿಂದೆ ಸಹಿ ಹಾಕಿರುತ್ತೇನೆ. ನಾನು ಮೈಸೂರಿನ ಸೆಂಟ್ ಪಿಲೋಮಿನಾ ಚರ್ಚಿನ ಬಳಿ ಇರುವ ಟೀ ಅಂಗಡಿ ಬಳಿ ಸಹಿ ಹಾಕಿದ್ದೇನೆ. ಯಾವ ವಿಚಾರಕ್ಕೆ ಸಹಿ ಪಡೆದಿರುತ್ತಾರೆ ತಿಳಿದಿರುವುದಿಲ್ಲ. ನಾನು ಟಿ ಅಂಗಡಿ ಬಳಿ ಇದ್ದಾಗ ಪೊಲೀಸರು ಮಹಜರ್ ಮಾಡುತ್ತಿದ್ದೇವೆ ಸಹಿ ಹಾಕು ಎಂದು ಹೇಳಿದ್ದು, ಸಹಿ ಹಾಕಿರುತ್ತೇನೆ.

**2.** 6 ನೇ ಆರೋಪಿಯನ್ನು ನಾನು ನೋಡಿರುವುದಿಲ್ಲ. ಅವರ ಚಿನ್ನದ ಅಂಗಡಿಯ ಬಳಿ ನಾನು ಹೋಗಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ದಿಃ- **28.08.2024** ರಂದು ನನ್ನನ್ನು ಮತ್ತು ಚಾ.ಸಾಃ7 ರವರನ್ನು ಬೆಳಿಗ್ಗೆ ಸಿಸಿಬಿ ಕಚೇರಿಗೆ ಕರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸಿಸಿಬಿ ಕಚೇರಿಗೆ ಹೋದಾಗ ಅಲ್ಲಿ 1 ರಿಂದ 3 ನೇ ಆರೋಪಿತರು ಇದ್ದು, ಅವರು ಅನೇಕ ಪ್ರಕರಣಗಳಲ್ಲಿ ಚಿನ್ನ-ಬೆಳ್ಳಿ ಕಳ್ಳತನ ಮಾಡಿದ್ದರಿಂದ ಅವರನ್ನು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿಗಳು ತಾವು ಕದ್ದ ಚಿನ್ನ ಮತ್ತು ಬೆಳ್ಳಿಯನ್ನು ಮಾರಾಟ ಮಾಡಿದ್ದು, ಸದರಿ ಮಾರಾಟ ಮಾಡಿದ ಅಂಗಡಿಯನ್ನು ಮತ್ತು ಚಿನ್ನ-ಬೆಳ್ಳಿ ಒಡವೆಗಳನ್ನು ತೋರಿಸುತ್ತೇವೆ ಎಂದು ಹೇಳಿದ್ದರಿಂದ ಅಲ್ಲಿ ಮಹಜರ್ ಮಾಡಲು ಸಾಕ್ಷಿದಾರರಾಗಿ ನಮ್ಮನ್ನು ಕೇಳಿಕೊಂಡಿದ್ದು, ನಾವು ಆಗ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**4.** ನಾನು, ಚಾ.ಸಾಃ7, ಪೊಲೀಸರು ಮತ್ತು ಸದರಿ ಆಸಾಮಿಗಳು ಎಲ್ಲರೂ ಹೆಚ್.ಡಿ ಕೋಟೆಗೆ ಬೆಳಿಗ್ಗೆ ಹೋಗಿ ನಂತರ ಮದ್ಯಾಹ್ನ ಮೈಸೂರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾನು, ಚಾ.ಸಾಃ7, ಪೊಲೀಸರು ಮತ್ತು ಸದರಿ ಆಸಾಮಿಗಳು

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಬಿ.ಜೆ ಜ್ಯೂವಲರಿ ಅಂಗಡಿಗೆ ಹೋಗಿದ್ದು, ಅಲ್ಲಿ 2 ನೇ ಆರೋಪಿ ತಾವುಗಳು ಕದ್ದ ಬೆಳ್ಳಿ ಮತ್ತು ಚಿನ್ನದ ಆಭರಣಗಳನ್ನು ಸದರಿ ಅಂಗಡಿಯಲ್ಲಿ ಮಾರಾಟಮಾಡಿದ್ದು, ಅಲ್ಲಿ ಇದ್ದ 6 ನೇ ಆರೋಪಿಯನ್ನು ತೋರಿಸಿ ಅವರಿಗೆ ಕದ್ದ ಬೆಳ್ಳಿ ಮತ್ತು ಚಿನ್ನದ ಆಭರಣಗಳನ್ನು ಮಾರಾಟ ಮಾಡಿರುತ್ತೇವೆ ಎಂದು ತಿಳಿಸಿ, 6 ನೇ ಆರೋಪಿಗೆ ತಾನು 7-8 ಬಾರಿ ಕದ್ದ ವಸ್ತುಗಳನ್ನು ಮಾರಾಟ ಮಾಡಿದ್ದು, ಅವುಗಳನ್ನು ಪೊಲೀಸರ ಮುಂದೆ ಹಾಜರುಪಡಿಸುವಂತೆ ಕೇಳಿಕೊಂಡಾಗ, 6 ನೇ ಆರೋಪಿ ಈ ಪ್ರಕರಣಕ್ಕೆ ಸೇರಿದ 7 ವಸ್ತುಗಳನ್ನು ಸೇರಿ ಒಟ್ಟು 20 ಆಭರಣಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

5. ನಂತರ ಸದರಿ 20 ವಸ್ತುಗಳನ್ನು ಸದರಿ ಅಂಗಡಿಯಲ್ಲಿ ಮಹಜರನ್ನು ಮದ್ಯಾಹ್ನ 2 ರಿಂದ 4 ಗಂಟೆಯವರೆಗೆ ಜರುಗಿಸಿ ಪೊಲೀಸರು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿನ್ನದ ಅಂಗಡಿಯಲ್ಲಿ ಮಹಜರಿನ ವಿಚಾರ ಕೇಳಿಕೊಂಡು ನಾನು ಮಹಜರಿಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸದರಿ ಮಹಜರಿಗೆ ಸಂಬಂಧಪಟ್ಟ ನನ್ನ ಹೇಳಿಕೆಯನ್ನು ದಾಖಲಿಸಿ-ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.**

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**